ಆ) ಹಾಗಿದ್ದಲ್ಲಿ ಇದುವರೆಗೆ ಇಂತಹ ವಾಹನ ಪರವಾನಗಿ ಇಲ್ಲದ ಎಷ್ಟು ಮಕ್ಕಳ (ಹುಡುಗರ) ಪೋಷಕರಿಗೆ ದಂಡ ವಿಧಿಸಲಾಗಿದೆ?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಹೌದು.

ಆ) ಡ್ರೈವಿಂಗ್ ಲೈಸೆನ್ಸ್ ಇಲ್ಲದೆ ವಾಹನಗಳನ್ನು ಓಡಿಸುತ್ತಿದ್ದ ಯುವಕರ: ಯುವತಿಯವರ ವಿರುದ್ಧ ದಾಖಲಾದ ಪ್ರಕರಣಗಳು ಈ ಕಳಕಂಡಂತಿದೆ.

ವಯಸ್ಸು	ದ್ವಿಚಕ್ರ ವಾಹನಗಳು	ನಾಲ್ಕು ಚಕ್ರ ವಾಹನಗಳು
18 ವರ್ಷ ದೊಳಗಿನ	590	-
18 ರಿಂದ 20 ವರ್ಷ	1154	14

ಇದಲ್ಲದೆ,790 ಪೋಷಕರನ್ನು ಕರೆಯಿಸಿ ಅವರುಗಳ ಮಕ್ಕಳು ಸಂಚಾರ ನಿಯಮಗಳನ್ನು ಉಲ್ಲಂಘಿಸಿ ವಾಹನಗಳನ್ನು ಓಡಿಸಬಾರದೆಂದು ಹಾಗೂ ವಾಹನಗಳನ್ನು ಚಲಾಯಿಸಲು ಅಧಿಕೃತ ಪರವಾನಗಿಯನ್ನು ಹೊಂದಿಲ್ಲದ ಯುವಕರಿಗೆ ವಾಹನಗಳನ್ನು ನೀಡಬಾರದೆಂದು ಪೋಷಕರಿಗೆ ತಿಳುವಳಿಕೆ ನೀಡಲಾಗುತ್ತಿದೆ.

ಬೆಂಗಳೂರಿಗೆ ಕಾವೇರಿ ನೀರಿನ ನಾಲ್ಕನೇ ಯೋಜನೆ

2409 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡಲು ಕಾವೇರಿ ನದಿ ನೀರಿನ ನಾಲ್ಕನೇ ಯೋಜನೆಯನ್ನು ಜಾರಿಗೆ ತರಲು ಸರ್ಕಾರದ ಕ್ರಮಕೈಗೊಂಡಿದೆಯೇ?*
2. *ಇದರಿಂದ ನಗರಕ್ಕೆ ಸರಬರಾಜಾಗಲಿರುವ ನೀರಿನ ಪ್ರಮಾಣವೆಷ್ಟು?*
3. *ಈ ಯೋಜನೆಯ ಅನುಷ್ಠಾನದ ಬಗ್ಗೆ ಖಾಸಗಿ ಸಂಸ್ಥೆಗೆ ಸಮೀಕ್ಷೆ ನಡೆಸಿ ವರದಿ ತಿಳಿಸಲಾಗಿದೆಯೇ?*
4. *ಸದರಿ ಸಂಸ್ಥೆಯಿಂದ ವರದಿ ಬಂದಿದೆಯೇ? ಹಾಗಿದ್ದಲ್ಲಿ ಅದರ ಬಗ್ಗೆ ಪೂರ್ಣ ವಿವರ ನೀಡುವುದು?*
5. *ಈ ಯೋಜನೆಯನ್ನು ಖಾಸಗೀ ವಲಯದಲ್ಲಿ ಕೈಗೊಳ್ಳಲಾಗುವುದೇ?*

6. *ಹಾಗಿದ್ದಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲು ಬಂದಿರುವ ಸಂಸ್ಥೆಯ ವಿವರ ನೀಡುವುದು?*

7. *ಈ ಯೋಜನೆ ಯಾವಾಗ ಪ್ರಾರಂಭವಾಗುವುದು? ಹಾಗೂ ಪೂರ್ಣಗೊಳ್ಳುವುದು?*

ಶ್ರೀ ಅನಂತನಾಗ್ (ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು) :

1. ಹೌದು.

2. ಮೊದಲನೆಯ ಘಟ್ಟದಲ್ಲಿ ನಗರಕ್ಕೆ ದಿನಂಪ್ರತಿ 270 ದಶಲಕ್ಷ ಲೀಟರ್ ಹೆಚ್ಚುವರಿ ನೀರು ದೊರಕಲಿದೆ. ಎರಡನೆಯ ಘಟ್ಟದಲ್ಲಿ ಸಮೀಕ್ಷೆಯ ಮೇರೆಗೆ 500 ದಶಲಕ್ಷ ಲೀಟರ್ ಹೆಚ್ಚುವರಿ ನೀರು ದೊರಕಲಿದೆ.

3. ಹೌದು.

4. ವರದಿ ಇನ್ನೂ ಬಂದಿಲ್ಲ.

5. ಎರಡನೇ ಘಟ್ಟವನ್ನು ಖಾಸಗೀ ಸಹಭಾಗಿತ್ವದಲ್ಲಿ ಕೈಗೊಳ್ಳಲಾಗುವುದು.

6. ಇನ್ನೂ ಇಲ್ಲ.

7. 1) ಕಾವೇರಿ 4ನೇ ಹಂತದ ಮೊದಲ ಘಟ್ಟದ ಪ್ರಾರಂಭಿಕ ಕೆಲಸಗಳಾದ ವಿನ್ಯಾಸ, ಟೆಂಡರ್ ಸಿದ್ದಪಡಿಸುವ ಕಾರ್ಯಗಳು 15-1-97 ರಿಂದ ಪ್ರಾರಂಭವಾಗಿವೆ. ಈ ಯೋಜನೆಯು 2001-02 ರ ಕೊನೆಗೆ ಪೂರ್ಣಗೊಳ್ಳುವುದು.

2) ಕಾವೇರಿ 4ನೇ ಹಂತದ 2ನೇ ಘಟ್ಟ ಹಾಗೂ 5ನೇ ಹಂತದ ಕೆಲಸಗಳನ್ನು ಸಹಾ ಸಧ್ಯದಲ್ಲಿಯೇ ಪ್ರಾರಂಭಿಸಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ನಿವೃತ್ತಿಯ ಕೊನೆಯ ವರ್ಷಗಳಲ್ಲಿ ಸರ್ಕಾರಿ ನೌಕರರನ್ನು ಅನುಕೂಲವಾದ ಸ್ಥಳದಲ್ಲಿ ಮುಂದುವರಿಸುವುದು.

3506 - ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ನೌಕರರು ನಿವೃತ್ತಿ ಹೊಂದಲು ಎರಡು ವರ್ಷವಿದ್ದಾಗ, ಅವರು ಕೇಳುವ ಸ್ಥಳಕ್ಕೆ ವರ್ಗಾವಣೆ ಮಾಡುವುದು ಅಥವಾ ಅಂತಹವರು ಇದ್ದ ಸ್ಥಳದಲ್ಲೇ ಮುಂದುವರಿಸುವ ಬಗ್ಗೆ ಸರ್ಕಾರದ ಸುತ್ತೋಲೆ ಏನಾದರೂ ಇದೆಯೇ?

ಆ) ಹಾಗಿದ್ದಲ್ಲಿ, ಇದು ಜಾರಿಯಲ್ಲಿರುವುದೇ?

ಇ) ಜಾರಿಯಲ್ಲಿದ್ದರೆ, ಇದರ ಉಪಯೋಗ ಸರ್ಕಾರಿ ನೌಕರರಿಗೆ ಲಭ್ಯವಿರುತ್ತದೆಯೇ?